# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪<br>Part – IV | ಬೆಂಗಳೂರು, ಗುರುವಾರ, ೦೭ ಆಗಸ್ಟ್, ೨೦೨೫ (ಶ್ರಾವಣ ೧೬, ಶಕವರ್ಷ ೧೯೪೭)<br>BENGALURU, THURSDAY, 07 AUGUST, 2025 (SHRAVANA 16, SHAKAVARSHA 1947) | ನಂ. ೪೩೨<br>No.432 |
|---|---|---|


## OFFICE OF THE RETURNING OFFICER FOR VICE-PRESIDENTIAL ELECTION, 2025

## PUBLIC NOTICE
## OF
## ELECTION TO THE OFFICE OF VICE-PRESIDENT OF INDIA

WHEREAS a notification under sub-section (1) of Section 4 of the Presidential and Vice-Presidential Elections Act, 1952, for the holding of an election to fill the Office of Vice-President of India has been issued by the Election Commission, I, P.C. MODY, the Returning Officer for such election, do hereby give notice that—

(i) nomination papers may be delivered by a candidate or any one of his proposers or seconders to the undersigned at his office in Room No. RS-28, First Floor, Parliament House, New Delhi, or if he is unavoidably absent, to the Assistant Returning Officers, Ms. Garima Jain, Joint Secretary/Shri Vijay Kumar, Director, Rajya Sabha Secretariat at the said office between 11 a.m. and 3 p.m. on any day (other than a public holiday) not later than Thursday, the 21st August, 2025;

(ii) each nomination paper shall be accompanied by a certified copy of the entry relating to the candidate in the electoral roll for the Parliamentary constituency in which the candidate is registered as an elector;

(iii) every candidate shall deposit or cause to be deposited a sum of Rupees Fifteen Thousand only. This amount may be deposited in cash with the Returning Officer at the time of presentation of the nomination paper or deposited earlier in the Reserve Bank of India or in a Government Treasury

and in the latter case a receipt showing that the said deposit of the sum has been so made is required to be enclosed with the nomination paper;

(iv) forms of nomination papers may be obtained from the above said office at the time aforesaid;

(v) the nomination papers, other than those rejected under sub-section (4) of Section 5B of the Act, will be taken up for scrutiny at the said office in Room No. F-100, Sangoshthi-2, First Floor, Parliament House, New Delhi, on Friday, the 22nd August, 2025 at 11 a.m.;

(vi) the notice of withdrawal of candidatures may be delivered by a candidate, or any one of his proposers or seconders who has been authorised in this behalf in writing by the candidate, to the undersigned at the place specified in paragraph (i) above before three o'clock in the afternoon of Monday, the 25th August, 2025;

(vii) in the event of the election being contested, the poll will be taken on Tuesday, the 9th September, 2025 between the hours of 10 a.m. and 5 p.m. at the place of polling fixed under the rules.

New Delhi,
Dated the 7th of August, 2025

(P.C. MODY)
RETURNING OFFICER FOR THE
VICE-PRESIDENTIAL ELECTION, 2025
AND
SECRETARY-GENERAL, RAJYA SABHA

## ಚುನಾವಣಾಧಿಕಾರಿಯವರ ಕಛೇರಿ
## ಉಪ ರಾಷ್ಟ್ರಪತಿಯವರ ಚುನಾವಣೆ, 2025

## ಭಾರತದ ಉಪ ರಾಷ್ಟ್ರಪತಿಗಳ ಅಧಿಕಾರ ಪದದ ಚುನಾವಣೆಗೆ ಸಂಬಂಧಿಸಿದ ಸಾರ್ವಜನಿಕ ನೋಟೀಸು

ರಾಷ್ಟ್ರಪತಿಗಳ ಮತ್ತು ಉಪ-ರಾಷ್ಟ್ರಪತಿಗಳ ಚುನಾವಣಾ ಅಧಿನಿಯಮ, 1952ರ 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಭಾರತದ ಉಪ ರಾಷ್ಟ್ರಪತಿಯವರ ಅಧಿಕಾರ ಪದವನ್ನು ತುಂಬಲು ಚುನಾವಣೆಯನ್ನು ನಡೆಸುವುದಕ್ಕಾಗಿ ಭಾರತ ಚುನಾವಣಾ ಆಯೋಗವು ಅಧಿಸೂಚನೆಯನ್ನು ಹೊರಡಿಸಿರುವುದರಿಂದ, ಅಂತಹ ಚುನಾವಣೆಗೆ ಚುನಾವಣಾ ಅಧಿಕಾರಿಯಾಗಿರುವ ಪಿ.ಸಿ.ಮೋದಿ ಆದ ನಾನು ಈ ಮುಂದಿನಂತೆ ನೋಟೀಸು ನೀಡುತ್ತಿದ್ದೇನೆ-

(i) ನಾಮಪತ್ರಗಳನ್ನು ಅಭ್ಯರ್ಥಿಯಾಗಲೀ ಅಥವಾ ಅವರ ಸೂಚಕರು ಅಥವಾ ಅನುಮೋದಕರ ಪೈಕಿ ಯಾರೇ ಆಗಲಿ ಈ ಕೆಳಗೆ ಸಹಿ ಮಾಡಿದವರಿಗೆ ಕೊಠಡಿ ಸಂಖ್ಯೆ ಆರ್‌ಎಸ್-28, ಮೊದಲನೇ ಮಹಡಿ, ಸಂಸತ್ ಭವನ, ನವದೆಹಲಿ ಇಲ್ಲಿರುವ ಅವರ ಕಛೇರಿಯಲ್ಲಿ ಅಥವಾ ಅವರು ಅನಿವಾರ್ಯವಾಗಿ ಗೈರು ಹಾಜರಾಗಿದ್ದರೆ, ಸಹಾಯಕ ಚುನಾವಣಾಧಿಕಾರಿಗಳಾದ ಕು. ಗರಿಮಾ ಜೈನ್, ಜಂಟಿ ಕಾರ್ಯದರ್ಶಿ/ಶ್ರೀ ವಿಜಯ್ ಕುಮಾರ್, ನಿರ್ದೇಶಕರು, ರಾಜ್ಯ ಸಭಾ ಸಚಿವಾಲಯ ಇವರಿಗೆ ಸದರಿ ಕಛೇರಿಯಲ್ಲಿ (ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ) ಯಾವುದೇ ದಿನ **2025ನೇ ಆಗಸ್ಟ್ ಗುರುವಾರ 21ನೇ ತಾರೀಖಿಗೆ** ಮೀರದಂತೆ ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 03-00 ಗಂಟೆಯೊಳಗೆ ಸಲ್ಲಿಸಬಹುದು;

(ii) ಪ್ರತಿಯೊಂದು ನಾಮಪತ್ರದ ಜೊತೆಗೆ ಅಭ್ಯರ್ಥಿಯು ಲೋಕ ಸಭಾ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಮತದಾರನೆಂದು ನೋಂದಾಯಿತರಾಗಿರುವ ಬಗ್ಗೆ ಪ್ರಮಾಣೀಕೃತ ಪ್ರತಿಯನ್ನು ಲಗತ್ತಿಸತಕ್ಕದ್ದು;

(iii) ಪ್ರತಿಯೊಬ್ಬ ಅಭ್ಯರ್ಥಿಯು ಹದಿನೈದು ಸಾವಿರ ರೂಪಾಯಿ ಮೊಬಲಗನ್ನು ಮಾತ್ರ ಠೇವಣಿ ಮಾಡತಕ್ಕದ್ದು ಅಥವಾ ಮಾಡಿಸತಕ್ಕದ್ದು. ಈ ಮೊಬಲಗನ್ನು ನಾಮಪತ್ರವನ್ನು ಸಾದರಪಡಿಸುವ ಕಾಲಕ್ಕೆ ಚುನಾವಣಾಧಿಕಾರಿಯ ಬಳಿ ನಗದಾಗಿ ಠೇವಣಿ ಮಾಡಬಹುದು ಅಥವಾ ಮುಂಚಿತವಾಗಿ ಆ ಮೊಬಲಗನ್ನು ಭಾರತದ ರಿಸರ್ವ್ ಬ್ಯಾಂಕಿನಲ್ಲಿ ಅಥವಾ ಸರ್ಕಾರಿ ಖಜಾನೆಯಲ್ಲಿ ಠೇವಣಿ ಮಾಡಬಹುದು ಮತ್ತು ತರುವಾಯದ ಸಂದರ್ಭದಲ್ಲಿ ಆ ಮೊಬಲಗನ್ನು ಹಾಗೆ ಠೇವಣಿ ಮಾಡಲಾಗಿದೆಯೆಂದು ತೋರಿಸುವ ರಸೀದಿಯನ್ನು ನಾಮಪತ್ರಕ್ಕೆ ಲಗತ್ತಿಸುವುದು ಅವಶ್ಯಕವಾಗಿರುತ್ತದೆ;

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(iv) ನಾಮಪತ್ರದ ನಮೂನೆಗಳನ್ನು ಮೇಲೆ ಹೇಳಿದ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆದುಕೊಳ್ಳಬಹುದು;

(v) ಅಧಿನಿಯಮದ 5ಬಿ ಪ್ರಕರಣ (4)ನೇ ಉಪ-ಪ್ರಕರಣದ ಮೇರೆಗೆ ತಿರಸ್ಕರಿಸಲಾದ ನಾಮಪತ್ರಗಳನ್ನು ಹೊರತುಪಡಿಸಿ ಇತರೆ ನಾಮಪತ್ರಗಳನ್ನು ಸದರಿ ಕಛೇರಿಯಲ್ಲಿ ಅಂದರೆ ಕೊಠಡಿ ಸಂಖ್ಯೆ ಎಫ್-100, ಸಂಗೋಷ್ಠಿ-2, ಮೊದಲನೇ ಮಹಡಿ, ಸಂಸತ್ ಭವನ, ನವದೆಹಲಿಯಲ್ಲಿ **2025ನೇ ಆಗಸ್ಟ್ ಶುಕ್ರವಾರ 22ನೇ ತಾರೀಖಿಗೆ ಬೆಳಗ್ಗೆ 11-00 ಗಂಟೆಗೆ** ಪರಿಶೀಲನೆಗಾಗಿ ತೆಗೆದುಕೊಳ್ಳಲಾಗುವುದು;

(vi) ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಅಭ್ಯರ್ಥಿಯು ಅಥವಾ ಈ ಸಂಬಂಧದಲ್ಲಿ ಅಭ್ಯರ್ಥಿಯಿಂದ ಲಿಖಿತದಲ್ಲಿ ಅಧಿಕಾರ ಪಡೆದ ಅವರ ಸೂಚಕರು ಅಥವಾ ಅನುಮೋದಕರ ಪೈಕಿ ಯಾರದರೊಬ್ಬರು ಈ ಕೆಳಗೆ ಸಹಿ ಮಾಡಿರುವವರಿಗೆ ಮೇಲಿನ ಪ್ಯಾರಾ (1)ರಲ್ಲಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ **2025ನೇ ಆಗಸ್ಟ್ ಸೋಮವಾರ 25ನೇ ತಾರೀಖು ಮಧ್ಯಾಹ್ನ 03-00 ಗಂಟೆಗೆ** ಮುಂಚೆ ಸಲ್ಲಿಸಬಹುದು;

(vii) ಚುನಾವಣೆಗೆ ಸ್ಪರ್ಧೆಯು ನಡೆಯುವಂತಹ ಸಂದರ್ಭದಲ್ಲಿ **2025ನೇ ಸೆಪ್ಟೆಂಬರ್ ಮಂಗಳವಾರ 9ನೇ ತಾರೀಖು ಬೆಳಗ್ಗೆ 10-00 ಗಂಟೆಯಿಂದ ಸಂಜೆ 05-00 ಗಂಟೆಯ ಒಳಗೆ,** ನಿಯಮಗಳ ಮೇರೆಗೆ ನಿಗದಿಯಾದ ಮತದಾನದ ಸ್ಥಳದಲ್ಲಿ ಮತದಾನ ನಡೆಸಲಾಗುವುದು.

ನವದೆಹಲಿ
ದಿನಾಂಕ: 7ನೇ ಆಗಸ್ಟ್ 2025

**( ಪಿ.ಸಿ.ಮೋದಿ)**
ಚುನಾವಣಾಧಿಕಾರಿ
ಭಾರತದ ಉಪ ರಾಷ್ಟ್ರಪತಿಗಳ ಅಧಿಕಾರ ಪದದ ಚುನಾವಣೆ, 2025
ಮತ್ತು ಸೆಕ್ರೆಟರಿ ಜನರಲ್, ರಾಜ್ಯ ಸಭಾ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH